ಅ) ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಎಷ್ಟು ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ? ಹುದ್ದೆವಾರು ವಿವರ ನೀಡುವುದು:

ಇ) ಇಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ಇದ್ದರೂ ಸಹ ಇವುಗಳನ್ನು ತುಂಬದೆ ಇರಲು ಕಾರಣವೇನು?

ಈ) ಈ ಖಾಲಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ದ್ವಿತೀಯ ದರ್ಜೆ ಸಹಾಯಕ ಒಂದು ಹುದ್ದೆ 3 ವರ್ಷಗಳಿಂದ ಖಾಲಿ ಇದೆ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ಒಂದು ಹುದ್ದೆ 2 ತಿಂಗಳಿಂದ ಖಾಲಿ ಇರುತ್ತವೆ. ಇನ್ನು ಉಳಿದ ಹುದ್ದೆಗಳು ಭರ್ತಿಯಾಗಿರುತ್ತದೆ.

ಇ) ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕ ಹುದ್ದೆಯು ಗ್ರಾಮೀಣ ಕೃಪಾಂಕದ ವಿಚಾರದಲ್ಲಿ ಲೋಕಸೇವಾ ಆಯೋಗದ ಹಂತದಲ್ಲಿ ಪರಿಶೀಲನೆ ಇದ್ದುದರಿಂದ ಮತ್ತು ತತ್ಸಂಬಂಧದಲ್ಲಿ ಅಂತಿಮ ತೀರ್ಮಾನ ಸಕಾಲದಲ್ಲಿ ಆಗದಿದ್ದುದರಿಂದ ನೇಮಕಾತಿ ತಡವಾಗಿರುತ್ತದೆ.

ಈ) ಖಾಲಿ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ಹುದ್ದೆಯನ್ನು ಭರ್ತಿ ಮಾಡಲು ತರಬೇತಿ ಪಡೆದ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ. ಈ ಸಾಲಿನ ತರಬೇತಿ ಮುಗಿದ ನಂತರ ನೇಮಕಾತಿ ಮಾಡಿ ಭರ್ತಿ ಮಾಡಲಾಗುವುದು.

ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಯಲ್ಲಿ ಲೆಪ್ರೋಸ್ಕೋಪಿಕ್ ಯಂತ್ರದ ದುರಸ್ಥಿ

4039 (4726) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯು ಭಾರೀ ವೆಚ್ಚದಲ್ಲಿ ಸುಸಜ್ಜಿತವಾಗಿ ಮಾರ್ಪಟ್ಟಿದ್ದರೂ ಸಹ ಲೆಪ್ರೋಸ್ಕೋಪಿಕ್ ಯಂತ್ರ ದುರಸ್ಥಿ ಮಾಡಲು ನಿರ್ಲಕ್ಷ್ಯವೇಕೆ?

ಆ) ಈ ಯಂತ್ರ ದುಸ್ಥಿತಿಗೆ ಬಂದು ಎಷ್ಟು ವರ್ಷವಾಯ್ತು? ಇದನ್ನು ದುರಸ್ಥಿ ಮಾಡಿಸದಿರಲು ಕಾರಣಗಳೇನು?

ಇ) ಇದರ ದುರಸ್ಥಿ ವ್ಯವಸ್ಥೆಗೆ ಬೇಕಾದ ಮೊತ್ತವೆಷ್ಟು?

ಈ) ಹಾಗೂ ಸದರಿ ಆಸ್ಪತ್ರೆಯಲ್ಲಿ ಲೆಪ್ರೋಸ್ಕೋಪಿಕ್ ಬಳಕೆ ಬಿಟ್ಟು ಟ್ಯುಬೆಕ್ಟಮಿ ಚಿಕಿತ್ಸೆಗೆ ಮುಂದಾಗಿರುವುದರ ಔಚಿತ್ಯವೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮತ್ತು ಆ) ಹೊಸ ಲೆಪ್ರೋಸ್ಕೋಪಿಕ್ ಯಂತ್ರ ಸರಬರಾಜಾಗಿವೆ. ದುರಸ್ಥಿಗೆ ಬಂದಿರುವ ಯಂತ್ರಗಳು ಬಹಳ ಹಳೆಯ ಮಾಡೆಲ್‌ಗಳಾಗಿರುವುದರಿಂದ ದುರಸ್ಥಿ ಮಾಡಿಸಿರುವುದಿಲ್ಲವೆಂದು ಜಿಲ್ಲಾ ಶಸ್ತ್ರ ಚಿಕಿತ್ಸಕರು ತಿಳಿಸಿರುತ್ತಾರೆ.

ಆ) ಉದ್ಭವಿಸುವುದಿಲ್ಲ.

ಇ) ಗ್ರಾಮಾಂತರ ಪ್ರದೇಶದಲ್ಲಿ ಟ್ಯುಬೆಕ್ಟಮಿ ಆಪರೇಷನ್ ಮಾಡದಿರುವುದರಿಂದ ಟ್ಯುಬೆಕ್ಟಮಿ ಶಸ್ತ್ರ ಚಿಕಿತ್ಸೆಗಾಗಿಯೇ ಬರುವ ಪ್ರಕರಣಗಳು ಜಾಸ್ತಿ. ಆದರೂ ಸಹ ಈ ಆಸ್ಪತ್ರೆಯಲ್ಲಿ ವಾರದಲ್ಲಿ ಒಂದು ದಿನ ಅಂದರೆ ಪ್ರತೀ ಬುಧವಾರ ಲೆಪ್ರೋಸ್ಕೋಪಿಕ್ ಚಿಕಿತ್ಸೆ ನಡೆಸಲಾಗುತ್ತಿದೆ.

ರಾಜ್ಯದಲ್ಲಿರುವ ಆಶ್ರಯ ಫಲಾನುಭವಿಗಳು

4040 (4727) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಸತಿ ಮತ್ತು ನಿವೇಶನ ರಹಿತರ ಸಮೀಕ್ಷೆ ನಡೆಸಲಾಗಿದೆಯೇ; (ನಡೆಸಿದ್ದಲ್ಲಿ, ತಾಲ್ಲೂಕುವಾರು ಅಂಕಿ ಅಂಶ ಒದಗಿಸುವುದು)

ಆ) ಆಶ್ರಯ ಫಲಾನುಭವಿಗಳ ಆಯ್ಕೆ ಸರ್ಕಾರದ ಮಾದರಿ ಸೂತ್ರಕ್ಕೆ (Guidelines) ಬದಲಾವಣೆ ತರಲಾಗಿದೆಯೇ; ಅಥವಾ ತರಲು ಉದ್ದೇಶಿಸಲಾಗಿದೆಯೇ;

ಇ) ಈ ಮಾದರಿ ಸೂತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶ ನೀಡಲಾಗಿದೆಯೇ; ಪಾಲಿಸದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು;

ಈ) ಆಶ್ರಯ ಮನೆಗಳನ್ನು ಮನೆ ಇರುವವರೆಗೆ ಹಂಚಿದರೆ, ಅಂತಹ ಸಮಿತಿಗೆ ಸಹಕರಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಕೈಗೊಂಡಿದ್ದಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) ಹೌದು

ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಇಲ್ಲ

ಇ) ಹೌದು

ಮಾರ್ಗಸೂಚಿಗಳನ್ನು ಪಾಲಿಸದಿದ್ದಲ್ಲಿ ಅಂತಹ ಫಲಾನುಭವಿಗಳ ಪಟ್ಟಿಯನ್ನು ರದ್ದುಪಡಿಸಲಾಗುವುದು.

ಈ) ಅಂತಹ ಆಶ್ರಯ ಸಮಿತಿಗಳನ್ನು ವಜಾ ಮಾಡಲಾಗುವುದು. ಇದುವರೆಗೆ ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.